ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು	ಕಾರ್ಖಾನೆ ಸ್ಥಾಪಿಸಬೇಕೆಂದಿರುವ ಸ್ಥಳ
ಮೈಸೂರು ಜಿಲ್ಲೆ		
45.	ಎಂ. ಅಂಡ್ ಸಿ. ಎಕ್ಸ್‌ಪೋರ್ಟ್ ಇಂಡಸ್ಟ್ರೀಸ್	ಟದ್ದಿಹಳ್ಳಿ, ಹುಣಸೂರು ತಾಲ್ಲೂಕು
46.	ಚಂದ್ರಪ್ರಕಾಶ್ ಶುಗರ್ಸ್	ಬನ್ನೂರು, ಟಿ.ನರಸೀಪುರ ತಾಲ್ಲೂಕು
47.	ಶಿವ ಶುಗರ್ಸ ಲಿ	ಹಾರೋಹಳ್ಳಿ, ಮೈಸೂರು ತಾಲ್ಲೂಕು
48.	ಬನ್ನೂರು ಶುಗರ್ಸ	ಬನ್ನೂರು, ಟಿ. ನರಸೀಪುರ ತಾ:
49.	ಸಂಗೀತ ಶುಗರ್ಸ ಅಂಡ್ ಕೆಮಿಕಲ್ಸ್	ಮುದಾಪುರ, ಚಾಮರಾಜನಗರ ತಾಲ್ಲೂಕು
50.	ಬಿಳಿಗಿರಿ ಶುಗರ್ಸ ಲಿ.	ಹನೂರು, ಕೊಳ್ಳೇಗಾಲ ತಾಲ್ಲೂಕು.
51.	ಬೊರೋಕಪವರ್ ಕಾರ್ಪೋರೇಷನ್ (ಲಿ)	ತೆರಕನಾಂಬಿ, ಗುಂಡ್ಲಪೇಟೆ ತಾಲ್ಲೂಕು.
ತುಮಕೂರು ಜಿಲ್ಲೆ		
52.	ಸಿದ್ದಲಿಂಗೇಶ್ವರ ಶುಗರ್ಸ್	ಕಲ್ಲೂರು ಕ್ರಾಸ್, ಗುಬ್ಬಿ ತಾಲ್ಲೂಕು.
53.	ಅಶೋಕ್ ಶುಗರ್ಸ್ ಮತ್ತು ಕೆಮಿಕಲ್ಸ್	ಹೆರೂರು, ಗುಬ್ಬಿ ತಾಲ್ಲೂಕು.
54.	ಪರಮೇಶ್ವರ ಶುಗರ್ಸ್	ಗುಬ್ಬಿ.
ಶಿವಮೊಗ್ಗ ಜಿಲ್ಲೆ		
55.	ಅಂಜನೇಯ ಶುಗರ್ಸ್	ಕುಂದೂರು, ಹೊನ್ನಾಳಿ ತಾಲ್ಲೂಕು
ಗುಲ್ಬರ್ಗಾ ಜಿಲ್ಲೆ		
56.	ಚಿಂಚೋಳಿ ಶುಗರ್ಸ್	ಚಿಂಚೋಳಿ, ಚಿಂಚೋಳಿ ತಾಲ್ಲೂಕು
57.	ಉಷಾ ಬೆಲಟ್ರಾನ್(ಲಿ)	ನಾರಾಯಣಪುರ, ಶರಾಪುರ ತಾ:

ಸರ್ಕಾರದ ಸ್ವಾಮ್ಯದಲ್ಲಿರುವ ಕೈಗಾರಿಕೆಗಳ ವಿವರ

535 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ವಲಯದಲ್ಲಿ ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿ ಕೆಲಸ ಮಾಡುತ್ತಿರುವ ಕೈಗಾರಿಕೆಗಳು ಎಷ್ಟು?

ಅ) ಈ ಕೈಗಾರಿಕೆಗಳ ಪೈಕಿ ಎನ್.ಜಿ.ಇ.ಎಫ್. ವಿಕ್ರಾಂತ್ ಟಯರ್ಸ್ ನಿ, ಕರ್ನಾಟಕ ಟೆಲಿಕಾಂ ನಿ., ಮತ್ತು ಮೈಸೂರು ಸೋಪ್ಸ್ ಮತ್ತು ಡಿಟರ್‌ಜೆಂಟ್ಸ್ ಈ ಸಂಸ್ಥೆಗಳನ್ನು ಕರ್ನಾಟಕ ಸರ್ಕಾರ ಮಾರಾಟ ಮಾಡಲು ಉದ್ದೇಶಿಸಿದೆಯೇ?

ಆ) ಇನ್ನು ಯಾವ ಯಾವ ಕೈಗಾರಿಕೆಗಳನ್ನು ಮಾರಾಟ ಮಾಡಲು ಉದ್ದೇಶಿಸಲಾಗಿದೆ?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು :

ಅ) 76.

ಆ) ಸರ್ಕಾರವು ಕರ್ನಾಟಕ ಟೆಲಿಕಾಂ ನಿಯಮಿತದಲ್ಲಿ ಷೇರು ಬಂಡವಾಳವನ್ನು ಹಿಂತೆಗೆದುಕೊಳ್ಳಲು ಎನ್.ಜಿ.ಇ.ಎಫ್. ಗೆ ಒಪ್ಪಿಗೆ ನೀಡಿದೆ. ವಿಕ್ರಾಂತ್ ಟಯರ್ಸ ಲಿಮಿಟೆಡ್‌ಗೆ ಸೂಕ್ತ ತಾಂತ್ರಿಕ ಪಾಲುದಾರರನ್ನು ತರಲು ಕೆಎಸ್‌ಐಐಡಿಸಿ ಗೆ ಒಪ್ಪಿಸಿದೆ ಹಾಗೂ ಅವಶ್ಯಕತೆ ಬಿದ್ದರೆ ಸೂಕ್ತ ಬಂಡವಾಳ ತೊಡಗಿಸದೇ ಇರಲು ನಿರ್ದರಿಸಿದೆ. ಎನ್‌ಜಿ.ಇಎಫ್. ಮತ್ತು ಕೆಎಸ್‌ಡಿಎಲ್ ಕಾರ್ಖಾನೆಗಳ ವಿಷಯ ಬಿ.ಐ.ಎಫ್.ಆರ್. ಮುಂದಿವೆ ಅವರು ಸೂಕ್ತ ಪುನರಸಜ್ಜೀಕರಣದ ಪ್ರಸ್ತಾವನೆಯ ಬಗ್ಗೆ ಪರಿಗಣಿಸುವರು.

ಇ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದುದನ್ನು ಹೊರತು ಪಡಿಸಿ, ಚಾಮುಂಡಿ ಮೆಷಿನ್ ಟೂಲ್ಸ ಲಿ.ನಲ್ಲಿ ಬಂಡವಾಳ ತೊಡಗಿಸದಿರಲು ಸರ್ಕಾರವು ನಿರ್ಧರಿಸಿದೆ.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಯೋಜನೆಗೆ ಖರ್ಚಾದ ಹಣ.

536 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಯೋಜನೆಯಲ್ಲಿ ಕಳೆದ 3 ವರ್ಷಗಳಿಂದ ಖರ್ಚು ಮಾಡಬೇಕಾದ ಹಣವೆಷ್ಟು, ಖರ್ಚು ಮಾಡಿದ ಹಣವೆಷ್ಟು, ಕೇಂದ್ರ ಸರ್ಕಾರದಿಂದ ಬಂದ ಹಣ ಮತ್ತು ರಾಜ್ಯದ ಪಾಲು ಇವುಗಳನ್ನು ಪ್ರತ್ಯೇಕವಾಗಿ ನೀಡುವುದು?

ಆ) ಕರ್ನಾಟಕ ಸರ್ಕಾರ ಕಳೆದ ಹಲವಾರು ವರ್ಷಗಳಿಂದ ತನ್ನ ಪಾಲಿನ ಪೂರ್ಣ ಹಣ ಖರ್ಚು ಮಾಡುತ್ತಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಖರ್ಚು ಮಾಡಲು ಕೈಗೊಳ್ಳಲಾಗಿರುವ ಕ್ರಮಗಳೇನು?

ಇ) ಖರ್ಚು ಮಾಡಲು ವಿಫಲರಾದ ಇಲಾಖೆ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ?